ಮಹಾತ್ವಾಕಾಂಕ್ಷೆಯದಾಗಿದೆ. ಒಂದು ಕಡೆಗೆ ಮನುಷ್ಯಕುಲದ ವಿಶ್ವಾತ್ಮಕವಾದ ಕಾಳಜಿಗಳ ಬಗ್ಗೆ ಅದು ಇದೆ. ಇನ್ನೊಂದು ಕಡೆಗೆ ನಾಗರೀಕತೆಯ ಬಗ್ಗೆಯೂ ಇದೆ. ತೇಜಶ್ರಿ ಇದನ್ನು ವಿಕಸನದ ಪ್ರಶ್ನೆಯೆಂದು ಸರಿಯಾಗಿ ಗುರುತಿಸಿದ್ದಾರೆ. ಮನುಷ್ಯ ನಾಗರಿಕತೆಯು ಮಲೆದೇಗುಲದಂಥ ಪರಿಕಲ್ಪನೆಗಳ ಮೂಲಕವೇ ವಿಕಸನಗೊಂಡಿದೆ. ಇವು ಮನಸ್ಸಿನ ಸೃಷ್ಟಿಯಾಗಿರಬಹುದು. ನಿತ್ಯ ಸತ್ಯಗಳಾಗಿರದೇ ಇರಬಹುದು. ಆದರೆ ಅವು ನಾಗರಿಕತೆಯ ವಿಕಸನದ ಚಾಲಕ ಶಕ್ತಿಗಳಾಗಿವೆ.

ಈ ಕಾವ್ಯದಲ್ಲಿ ಪು.ತಿ.ನ. ಅವರ ವಿಶಿಷ್ಟವಾದ ಕಲ್ಪನೆ ಎಂದರೆ ಮನಸಿನ ಆಳದಲ್ಲಿ ಇರುವ ಕತ್ತಲೆಯದು. ಇದು ಕತ್ತಲೆಯಾದರೂ ಸೃಜನಶೀಲವಾದುದು. ಇಡಿ ಜಗತ್ತನ್ನು 'ನಾದುವ' (ನಾದ/ನಾದು) ಮುರಳಿಯು ಅದರ ಕೈಯಲ್ಲಿದೆ. ನನಗೆ ಇದು Carl Jungನ Collective unconsciousನ ಹಾಗೆ ಕಂಡಿದೆ. ಇಲ್ಲಿಂದಲೇ ಬೆಳಕು ಕೂಡ ಹೊಮ್ಮಬೇಕಿದೆ. ನಾಗರಿಕತೆಯ ಮೂಲ ಕ್ರಿಯಾಶಕ್ತಿಯು ಇದರ ಒಡಲಲ್ಲೇ ಇದೆ. ಇದರ ಸಮಗ್ರವಾದ ವ್ಯಾಖ್ಯಾನವು ಪ್ರಸ್ತುತ ಟಿಪ್ಪಣಿ ಹರವಿನ ಆಚೆಗಿದೆ. ಆದರೆ ತೇಜಶ್ರೀ ಕೊನೆಯ ಮುಕ್ತಕಗಳನ್ನು ವ್ಯಾಖ್ಯಾನಿಸುವಾಗ ಈ ವಸ್ತುವಿನ ಬಗ್ಗೆ ಅನೇಕ ಒಳನೋಟಗಳನ್ನು ಕೊಟ್ಟಿದ್ದಾರೆ. ಈ ಕೃತಿಗೆ ಒಂದು ಮುಂದುವರೆದ ಭಾಗವನ್ನು ಬರೆದು ಅವರು ವಿಸ್ತರಿಸಬಹುದಾಗಿದೆ.

ಕೊನೆಯದಾಗಿ ಪು.ತಿ.ನ. ಅವರ ಕಾವ್ಯ ಭಾಷೆಯ ಬಗ್ಗೆ ನನಗಿರುವ ತಕರಾರಿನ ಬಗ್ಗೆ ಒಂದು ಮಾತು. ಇದರಲ್ಲಿಯ ಸಂಸ್ಕೃತ ಭೂಯಿಷ್ಟತೆ, ಪೆಡಸಾದ ರಚನೆಗಳು, ಸುದೀರ್ಘವಾದ ಸಮಾಸಗಳು ಇವುಗಳನ್ನು ತೇಜಶ್ರೀ ವಿವರಣೆಯೊಂದಿಗೆ ಓದಿದಾಗ ಸರಿಯೆನಿಸಬಹುದು. ಆದರೆ ಅವು ವಸ್ತು, ತಾತ್ವಿಕತೆಯ ದೃಷ್ಟಿಯಿಂದ ಅನಿವಾರ್ಯವೆಂದು ನನಗೆ ಅನ್ನಿಸುವುದಿಲ್ಲ. ಅನೇಕ ಮುಕ್ತಕಗಳ ಕೆಲವು ಭಾಗಗಳಲ್ಲಿ ಕಾವ್ಯ ಭಾಷೆಯು ಅತ್ಯಂತ ಪ್ರಭಾವಿಯಾಗಿದೆ. ನವೋದಯ ಕಾವ್ಯದ ಭಾಷೆಯ ಅಪಾರ ಸಾಧ್ಯತೆಗಳ ಬಗ್ಗೆ ಬೆರಗು ಹುಟ್ಟಿಸುವಂತಿದೆ. ಆದರೆ ಇನ್ನುಳಿದಂತೆ ನನ್ನಂಥ ಕಾವ್ಯದ ಅರ್ಧಶಿಕ್ಷಿತ ಓದುಗರಿಗೆ ಕ್ಲಿಷ್ಟಕರವಾಗಿ ಕಾಣುತ್ತದೆ. ●

**ಕವಿತೆ**



**ಭಾಸ್ಕರ ಕೆ. ಕಾಸರಗೋಡು**

## ಪಯಣ

ಎಲ್ಲಿಗೆ ಎಂದರಿಯದೆ
ಮಲ್ಲಿಗೆ ಪಯಣಿಸಿದೆ
ಮೈಲುಗಟ್ಟಲೆ ದೂರದಿಂದ
ಹಲವು ಮೈಲುಗಲ್ಲುಗಳ ದಾಟಿ

ನೀರಿನಲ್ಲಿ ನಿರುಮ್ಮಳವಾಗಿ
ಮುಳುಗಿ ನೆನೆದ ನಾರೊಂದು
ನೆನೆಯದೆ ನಿನ್ನೆಯ ದುರಿತ
ಪಕ್ಕಾಗಿ ಮಲ್ಲಿಗೆ ಜೊತೆ
ತಾನೂ ಹೊರಟಿದೆ

ಮದುವೆಗೆ ಇರಬಹುದು,
ಮಸಣಕ್ಕೂ ,
ಪೂಜೆಗೆ ಇರಬಹುದು
ಪುರಸ್ಕಾರಕ್ಕೂ ,
ನಾರಿಗೂ ತಿಳಿದಿಲ್ಲ, ಮಲ್ಲಿಗೆಗೂ
ದಾರಿಯ ಸುಳಿವು
ನಾರಿಯ ಮುಡಿಗೋ
ದೇವರ ಗುಡಿಗೋ
ಮುಗುಳ್ನಗೆ ಹಂಚಲೋ
ಕಣ್ಣೀರ ಕಡೆಯಲೋ

ಮಲ್ಲಿಗೆ ನಾರು ಪಯಣಿಸಿದೆ
ಎಲ್ಲಿಗೆ ಏನು ಎಂದರಿಯದೆ
ಚೌಕಾಶಿ ದೊರೆಗಳ ಚಿತ್ತ
ಎತ್ತ ಕೊಂಡೊಯ್ಯಿತೋ ಅತ್ತ!